**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 11 -11-2025:**

**ಪಾಟೀಸವಾಲುಃ 2ನೇ ಪಕ್ಷಗಾರರ ಪರ ವಕೀಲರಿಂದಃ** .

ನನಗೆ ಇನ್ಸೆಂಟಿವ್ ಕೊಟ್ಟಿಲ್ಲ ಎಂದು ಯಾವ ದಿನಾಂಕದಂದು ಕೇಳಿರುತ್ತೇನೆಂದು ನನ್ನ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 3-2-22ರಂದು ನೋಟೀಸು ಕಳುಹಿಸುವ ಮೂಲಕ ಕೇಳಿರುತ್ತೇನೆ. 2020ರಲ್ಲೂ ನಾನು ಕೇಳಿರುತ್ತೇನೆ. 2020ರಲ್ಲಿ ಕೇಳಿದ್ದೇನೆ ಎನ್ನುವ ವಿಚಾರವನ್ನು ನನ್ನ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ. 2021ರಲ್ಲೂ ನಾನು ಕೇಳಿಲ್ಲ ಮತ್ತು ಅದನ್ನು ನನ್ನ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ನೋಟೀಸಿನಲ್ಲಿ ಕಾಣಿಸಿದ್ದೇನೆ ಎನ್ನುತ್ತಾರೆ. 2021ರಲ್ಲಿ ಬಾಕಿ ಇಷ್ಟು ಇನ್ಸೆಂಟಿವ್ ಕೊಡಬೇಕೆಂದು ಹೇಳಿ ನಾನು 2021ರಲ್ಲಿ ಕೇಳಿಲ್ಲ.

2.2017ರಲ್ಲಿ ನನಗೆ ಇಷ್ಟು ಗಳಿಕೆ ರಜೆ ಇತ್ತು ಅದರ ಬದಲಿಗೆ ನನಗೆ ನಗದೀಕರಣ ಮಾಡಿಕೊಡಬೇಕೆಂದು ನಾನು 2017ರಲ್ಲಿ ಕೇಳಿರುತ್ತೇನೆ. ಈ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ನೀಡಿಲ್ಲ. 2017ರಿಂದ 2021ರವರೆಗೆ ನಾನು ಆಯಾಯ ವರ್ಷದಲ್ಲಿ ನನಗೆ ಇತ್ತೆಂದು ಹೇಳುವ ಗಳಿಕೆ ರಜೆಯ ಬದಲಿಗೆ ನಗದೀಕರಣ ಮಾಡಿಕೊಡಬೇಕೆಂದು ಹೇಳಿ ಆಯಾಯ ವರ್ಷದಲ್ಲಿ ಕೇಳಿರುತ್ತೇನೆ. ಈ ರೀತಿ ಕೇಳಿರುತ್ತೇನೆ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ.

3.2017ರಲ್ಲಿ ನನಗೆ ಬೋನಸ್ ಬರಬೇಕಾಗಿತ್ತು ಎಂದು ನಾನು ಅದೇ ವರ್ಷದಲ್ಲಿ ಕೇಳಿಲ್ಲ ಎಂದರೆ ಸರಿಯಲ್ಲ. ಆ ವರ್ಷದಲ್ಲಿ ಕೇಳಿದ್ದೇನೆ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ನಿಜ. 2017ರಿಂದ 2021ರವರೆಗೆ ನನಗೆ ಆಯಾಯ ವರ್ಷದಲ್ಲಿ ಬರಬೇಕಾಗಿತ್ತೆಂದು ಹೇಳುವ ಬೋನಸ್ ನ್ನು ಆಯಾಯ ವರ್ಷದಲ್ಲಿ ಕೇಳಿಲ್ಲ ಮತ್ತು ಅರ್ಜಿಯಲ್ಲೂ ನಮೂದಿಸಿಲ್ಲ ಎಂದರೆ ಸಾಕ್ಷಿಯು ಕೇಳಿರುತ್ತೇನೆ ಆದರೆ ನಿಖರವಾಗಿ ಯಾವ ದಿನಾಂಕ ಎಂದು ನಮೂದಿಸಿಲ್ಲ ಎನ್ನುತ್ತಾರೆ. ಆಯಾಯ ವರ್ಷದಲ್ಲಿ ನಾನು ಬೋನಸ್ ನ್ನು ಕೊಡುವಂತೆ ಕೇಳಿರುತ್ತೇನೆಂದು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

4.ನಾನು ಕಾರ್ಮಿಕ ಇಲಾಖೆಗೆ ಯಾವ ದಿನಾಂಕದಂದು ಅರ್ಜಿ ಕೊಟ್ಟದ್ದೆಂದು ಹೇಳಲಾಗುವುದಿಲ್ಲ. ನಾನು ಈ ಅರ್ಜಿ ಹಾಕಲು ವಿಳಂಬವಾಗಿರುವುದರಿಂದ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಮತ್ತು ಸುಳ್ಳು ಕ್ಲೇಮ್ ಗಾಗಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಇನ್ಸೆಂಟಿವ್ ಬೋನಸ್ ಮತ್ತು ಗಳಿಕೆ ರಜೆ ನಗದೀಕರಣವನ್ನು ಆಯಾಯ ವರ್ಷ ಕೇಳಿರುವ ಬಗ್ಗೆ ಯಾವುದೇ ಸಕಾರಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಿಳಂಬಕ್ಕೆ ಇರುವ ಕಾರಣಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಕಾರ್ಮಿಕ ನ್ಯಾಯಾಲಯದಲ್ಲಿ ಆಗಿರುವ ತೀರ್ಪಿನ ಪ್ರತಿಯನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಇಲ್ಲಿ ವಿಳಂಬವನ್ನು ಮನ್ನಾ ಮಾಡಲು ನಾನು ಹಾಜರುಪಡಿಸಿದ ದಾಖಲೆ ಸೂಕ್ತ ದಾಖಲೆ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**